


## ಯುವವೇದಿಕೆ


# ಸದಾಚಾರದಿಂದ ಉದ್ಧಾರ

ಸ್ವಾಮಿ ಪುರುಷೋತ್ತಮಾನಂದ

ಇಂದಿನ ಸಮೂಹ ಮಾಧ್ಯಮವು ಯುವಕರ ಮನಸ್ಸನ್ನು ಕೆಡಿಸಿ ಅವರ ಜೀವನವನ್ನು ದುಃಖಮಯಗೊಳಿಸುತ್ತಿದೆ ಎಂಬುದು ಸಾಮಾನ್ಯ ಅಭಿಪ್ರಾಯ. ಈ ವಿಷಯವನ್ನು ಕುರಿತ ವೈಚಾರಿಕ ಚಿಂತನೆಯೇ ಈ ಲೇಖನದ ವಿಷಯ. ಹಲವಾರು ಗ್ರಂಥ, ಲೇಖನಗಳನ್ನು ಬರೆದಿರುವ ಪೂಜ್ಯ ಪುರುಷೋತ್ತಮಾನಂದರು ಈಗ ಬೆಳಗಾವಿಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾಗಿರುವರು.

ಇಂದು ಹೇರಳವಾಗಿ ಹೊರಬರುತ್ತಿರುವ ವರ್ತಮಾನ ಪತ್ರಿಕೆಗಳು ಕಥೆ-ಕಾದಂಬರಿಗಳು ಜನಕೋಟಿಗೆ ಜಗತ್ತಿನ ವಿವಿಧ ವಿದ್ಯಮಾನಗಳನ್ನು ಸಾಕಷ್ಟು ಪರಿಚಯಿಸಿಕೊಡುತ್ತಿವೆ. ತನ್ಮೂಲಕ ಒಂದಿಷ್ಟು ಜನಜಾಗೃತಿಯೂ ಆಗುತ್ತಿದೆಯೆನ್ನಬಹುದು. ಇನ್ನು ಸಿನೆಮಾ, ಟಿ.ವಿ. ಐ.ಟಿಗಳೇ ಮೊದಲಾದ ಮಾಧ್ಯಮಗಳ ಮೂಲಕ ದೊರೆಯುವ ಮಾಹಿತಿಗಳಂತೂ ಮಾತಿಗೆ ಮೀರಿದ್ದು! ಆದರೆ ಇವೆಲ್ಲವೂ ಸೇರಿ ಮಾನವ ಜಗತ್ತು ಪ್ರಗತಿ ಪಥದಲ್ಲಿ ವೇಗವಾಗಿ ಮುಂದುವರಿಯಲು ಸಹಾಯವಾಗುವಂತೆ ಅಪಗತಿಯ ಇಳಿಜಾರಿನಲ್ಲಿ ಜರ್‍ರನೆ ಜಾರಲೂ ಕಾರಣವಾಗುತ್ತಿರುವುದು ಕಣ್ಣಿರುವವರಿಗೆ ಕಾಣುತ್ತಲೇ ಇದೆಯಲ್ಲ! ಇಲ್ಲೊಂದು ಆಲೋಚನೀಯ ಅಂಶವಿದೆ. ಏನೆಂದರೆ, ಜನತೆ ದುರ್ಮಾರ್ಗ ಹಿಡಿಯುವುದಕ್ಕೆ ಈ ಆಧುನಿಕ ಮಾಧ್ಯಮಗಳು ಸಾಕಷ್ಟು ಪ್ರಚೋದಿಸುತ್ತವೆ ಎಂಬ ಮಾತಿನಲ್ಲಿ ನಿಜವಿದೆಯೆಂದು ಒಪ್ಪಿಕೊಳ್ಳಬಹುದಾದರೂ ಅದೇ ಪೂರ್ತಿ ನಿಜವೆನ್ನುವುದು ಮಾತ್ರ ಖಂಡಿತ ತರವಲ್ಲ ಎಂಬುದೇ ಆ ಅಂಶ. ಏಕೆಂದರೆ ಜಗತ್ತಿನ ಸಮಸ್ತ ದುಷ್ಟರಿಗೂ ಅಗ್ರಗಣ್ಯರಂತಿರುವ ರಾವಣ-ಕಂಸ-ಕೌರವಾದಿಗಳು ಯಾವ ಮಾಧ್ಯಮವನ್ನು ವೀಕ್ಷಿಸಿ ದುರ್ಮಾರ್ಗಿಗಳಾದರು? ಅಲ್ಲದೆ, ಅವರೆಲ್ಲ ಅತ್ಯುತ್ತಮ ವಂಶಗಳಲ್ಲೆ ಜನ್ಮತಳೆದವರು! ಇನ್ನು ದೇವೇಂದ್ರಾದಿಯಾಗಿ ಕೆಲವು ದೇವತೆಗಳಿಂದ ಹಿಡಿದು ಹಲವಾರು ತಪಸ್ವಿಗಳೂ ತಪ್ಪುದಾರಿ ತುಳಿದ ಉದಾಹರಣೆಗಳಿವೆ. ಇವರಾವ ಮಾಧ್ಯಮಗಳನ್ನು ವೀಕ್ಷಿಸಿದ್ದರು? ಹೀಗಿರುವಾಗ ಜನರು ಭ್ರಷ್ಟರಾಗುವುದಕ್ಕೆ ಈ ಮಾಧ್ಯಮಗಳೆ ಕಾರಣವಾಗಬೇಕಿಲ್ಲವೆಂದಾಯಿತಲ್ಲ! ಅಷ್ಟೇ ಅಲ್ಲ; ಇಲ್ಲಿ ಇನ್ನೂ ಒಂದು ಸ್ವಾರಸ್ಯಕರ ವಿಚಾರವಿದೆ. ಏನೆಂದರೆ ಸಿನೆಮಾ, ಟಿ.ವಿಗಳೇ ಮೊದಲಾದ ಮಾಧ್ಯಮಗಳಲ್ಲಿ ಅದೇ ರಾವಣ-ಕಂಸ-ಕೌರವಾದಿಗಳ ಅಥವಾ ಅವರಂಥವರ ಚಾರಿತ್ರ್ಯಗಳನ್ನೇ ಒಳ್ಳೇ ರಸವತ್ತಾಗಿ ಬಿತ್ತರಿಸಲಾಗುತ್ತಿದೆ! ಆದ್ದರಿಂದ ಈಗ ನಾವು ಪರಾಮರ್ಶಿಸಿ ನೋಡಬೇಕು, ಏನೆಂದರೆ, ಈ ಮಾಧ್ಯಮಗಳಲ್ಲಿ ಬಿತ್ತರಿಸಿದ್ದನ್ನು ಕಂಡು ಕಂಡು ಜನ ಕೆಡುವುದೋ ಅಥವಾ ಜನ ಮಾಡಿದ್ದನ್ನು ಕಂಡೇ ಮಾಧ್ಯಮಗಳಲ್ಲಿ ಬಿತ್ತರಿಸುವುದೋ ಎಂದು! ಆದರೆ, ಹೀಗೂ ಒಂದು ಸತ್ಯಾಂಶವಿದೆ: ಕೇಡಿಗ ಮನೋಭಾವದವರು ಕೆಡುವುದು ಇದ್ದೇ ಇದೆ. ಆದರೆ, ಮಾಧ್ಯಮಗಳ ಪ್ರಭಾವದಿಂದ ಮತ್ತಷ್ಟು ಕೆಡುತ್ತಾರೆ, ಬೇಗ ಬೇಗ ಕೆಡುತ್ತಾರೆ. ಅಷ್ಟೇ ಅಲ್ಲ, ತಕ್ಕಮಟ್ಟಿಗಾದರೂ ಒಳ್ಳೆಯವರಾಗಿರುವವರೂ ಮಾಧ್ಯಮಗಳ ಸಹವಾಸದಿಂದ ಪಥಭ್ರಷ್ಟರಾಗುವುದಿದೆ.

ಇದೆಲ್ಲ ಸರಿಯೇ. ಆದರೆ ಪರಿಹಾರೋಪಾಯವೇನು ಎಂಬುದೇ ಪ್ರಶ್ನೆ! ಹಾಗೆಯೆ, ಪರಿಹಾರೋಪಾಯವನ್ನು ಕಂಡುಕೊಳ್ಳುವ ಮೊದಲು ಇನ್ನೊಂದು ಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ—ನಿಜಕ್ಕೂ ಪರಿಹಾರವೆಂಬುದು ಬೇಕೆ? ಎಂದು! ಏಕೆಂದರೆ ಈ ಮಾಧ್ಯಮಗಳೇ ಆಗಲಿ, ಮದ್ಯಪಾನಗಳ ಸೌಲಭ್ಯಕ್ಕಾಗಿ ಎಲ್ಲೆಲ್ಲೂ ತೆರೆಯಲಾದ ಅಂಗಡಿಗಳೇ ಆಗಲಿ, ಕುದುರೆ ಜೂಜಿನ ಮೋಜಿಗಾಗಿಯೇ ಇರುವ ಸುಸಜ್ಜಿತ ಮೈದಾನಗಳೇ ಆಗಲಿ— ಇವುಗಳೆಲ್ಲ ದೇಶದಲ್ಲಿ ಜನಜನಿತವಾಗುತ್ತಿರುವುದು ಕೆಲವಾರು ಸಮರ್ಥ ಘಟಿಂಗರ ಕೈವಾಡದಿಂದಲೇ ಅಥವಾ ಸ್ವತಃ ಘನ ಸರಕಾರದ ಪ್ರೋತ್ಸಾಹದಿಂದಲೇ? ಎಂಬ ವಿಷಯವಾಗಿ ಆಲೋಚಿಸಿ ನೋಡಿದಾಗ ಪರಿಹಾರೋಪಾಯವನ್ನು ಕಂಡುಹುಡುಕಬೇಕಾದವರು ಯಾರು ಎಂಬ ಮತ್ತೊಂದು ಪ್ರಶ್ನೆಯೇ ನಮ್ಮ ಮುಂದೆ ನಿಲ್ಲುವುದಿಲ್ಲವೇ? ರಾಷ್ಟ್ರದ ಭದ್ರತೆಗೆ, ರಾಷ್ಟ್ರದ ಪ್ರಗತಿಗೆ, ರಾಷ್ಟ್ರದ ಸಭ್ಯತೆಗೆ, ರಾಷ್ಟ್ರದ ಸಂಸ್ಕೃತಿಗೆ, ಒಟ್ಟಿನಲ್ಲಿ ರಾಷ್ಟ್ರದ ಉತ್ಕೃಷ್ಟತೆಗೆ ಕಾರಣೀಭೂತವಾಗಿರಬೇಕಾದ ಮೊತ್ತಮೊದಲ ಸಂಸ್ಥೆಯೆಂದರೆ ಸರಕಾರವೇ ಅಲ್ಲವೇ? ಹಿಂದೆ ರಾಜನಿದ್ದ; ಇಂದು ಸರಕಾರ. ಆದರೆ, ಸರಕಾರವೇ ಮದ್ಯಪಾನದಿಂದ ಹಿಡಿದು ಮಾಧ್ಯಮಗಳವರೆಗೆ ಎಲ್ಲಕ್ಕೂ ಆಶೀರ್ವಾದ ಪೂರ್ವಕ ಪ್ರೋತ್ಸಾಹ ನೀಡುತ್ತಿರುವಾಗ ಮಹಾಜನತೆ ಮಾರ್ಗಭ್ರಷ್ಟವಾಗುವುದನ್ನು ತಪ್ಪಿಸಲು ಪರಿಹಾರೋಪಾಯವನ್ನು ಕಂಡುಹುಡುಕುವ ಮಂಡೆನೋವಿನ ಕೆಲಸಕ್ಕೆ ಮುಂದಾಗುವವರಾರು? ಬಹುಶಃ ಧರ್ಮಗುರುಗಳು ಈ ಕಾರ್ಯಕ್ಕೆ ತಕ್ಕ ವ್ಯಕ್ತಿಗಳೆಂದು ನಾವು ಭಾವಿಸುವುದು ಸಹಜವೇ. ಆದರೆ ಇಂದು ಬಹುತೇಕ ಧರ್ಮಗುರುಗಳು ಶಾಲಾ-ಕಾಲೇಜು-ಆಸ್ಪತ್ರೆಗಳೇ ಮೊದಲಾದ ಸೇವಾಕಾರ್ಯಗಳನ್ನು ಹಮ್ಮಿಕೊಂಡದ್ದರ ಪರಿಣಾಮವಾಗಿ ಅನುದಿನವೂ ಸರಕಾರದ ಅನುದಾನವನ್ನು ಅವಲಂಬಿಸಿಕೊಂಡಿರುವಂಥ ಪ್ರಸಂಗವೊದಗಿರುವುದರಿಂದ ಇನ್ನವರಲ್ಲಿ ಸರಕಾರಕ್ಕೆ ನೀತಿಸಂಹಿತೆಯನ್ನು ಬೋಧಿಸಲು ಬೇಕಾದ



ವ್ಯಕ್ತಿಯು ದುಷ್ಕಾರ್ಯವನ್ನು
ಮಾಡುತ್ತಿರುವಾಗ ಅದು
ಮಧುವಿನಂತೆ ಅವನಿಗೆ
ಸಿಹಿಯಾಗಿರುತ್ತದೆ. ಮುಂದೆ
ದುಷ್ಪರಿಣಾಮಗಳು ಉಂಟಾದಾಗ
ಅಗ್ನಿಯಲ್ಲಿ ದಹಿಸಲ್ಪಟ್ಟಂತೆ
ಸಂಕಟಪಡುತ್ತಾನೆ.

— ಬುದ್ಧ

ಸತ್ವವಿರಲು ಸಾಧ್ಯವೇ? ಇನ್ನು ಇತರ ಸಾಧು ಸಂನ್ಯಾಸಿಗಳು ಮುಂದೆ ಬರಬಹುದಲ್ಲ ಎಂದು ಕೇಳಿದರೆ, ಇತ್ತ ಅಧಿಕಾರ ಪಟ್ಟವೂ ಇಲ್ಲದ ಅತ್ತ ಅಪರಿಮಿತ ಆಧ್ಯಾತ್ಮಿಕ ಬಲವೂ ಇಲ್ಲದ ಅವರ ಮಾತನ್ನು ಯಾರು ತಾನೆ ಕೇಳಿಯಾರು?

ಹಾಗಾದರೆ ಪರಿಹಾರವೇನು? ಪರಿಹಾರವಿದೆ, ಖಂಡಿತ ಇದೆ. ಪರಮಾತ್ಮನೇ ಆ ಪರಿಹಾರೋಪಾಯವನ್ನು ಸದಾ ಜಾರಿಯಲ್ಲಿ ಇಟ್ಟಿದ್ದಾನೆ. ಯಾವುದದು? ಪ್ರತಿಫಲ ಅಥವಾ ಕರ್ಮಫಲವೆಂಬ ಪರಿಹಾರೋಪಾಯ! ಈ ಜಗತ್ತು ಕರ್ಮಭೂಮಿ. ಇಲ್ಲಿ ನಾವು ಗೈದ ಪ್ರತಿಯೊಂದು ಕ್ರಿಯೆಗೂ ಒಂದು ಪ್ರತಿಕ್ರಿಯೆ ಇದ್ದೇ ಇರುತ್ತದೆ, ಒಂದು ಪ್ರತಿಫಲವಿದ್ದೇ ಇರುತ್ತದೆ. ಕಾರ್ಯ ಒಳ್ಳೆಯದಾದರೆ ಒಳ್ಳೆಯ ಪ್ರತಿಫಲ, ಕೆಟ್ಟದಾದರೆ ಕೆಟ್ಟ ಪ್ರತಿಫಲ. ಇವುಗಳಿಗೇ ಕರ್ಮಫಲವೆಂದು ಹೆಸರು. ತಪ್ಪಿತಸ್ಥನೊಬ್ಬನು ಪೊಲಿಸರ ದೃಷ್ಟಿಯಿಂದ ಪಾರಾಗಬಲ್ಲ; ನ್ಯಾಯಾಧೀಶರ ಹಿಡಿತಕ್ಕೂ ಸಿಕ್ಕದಿರಬಲ್ಲ; ಆದರೆ ಅವನ ಕರ್ಮಫಲದ ವಜ್ರಮುಷ್ಟಿಯಿಂದ ಖಂಡಿತ ಬಿಡಿಸಿಕೊಳ್ಳಲಾರ. ಈ ಕರ್ಮಫಲಗಳು ಕಲಿಸುವ ಪಾಠದಷ್ಟು ಪರಿಣಾಮಕಾರಿಯಾದುದು ಯಾವ ಸಾಧುಸಂತರ ಪಾಠವೂ ಇಲ್ಲ. ಮನುಷ್ಯನ ದುರ್ನಡತೆಗೆ ತಕ್ಕುದಾದ ಕೆಟ್ಟ ಕರ್ಮಫಲವು ಕುಟ್ಟಿಕೊಂಡು ಬರುವಾಗ ಯಾತನೆ ತಾಳಲಾರದೆ ಗೋಳಾಡುವ ಅವನನ್ನು ಕೇಳುವವರಾರು? ಇಂಥದೊಂದು ಅಸಹಾಯಕ ಸ್ಥಿತಿಯಲ್ಲಿ ಅವನು ತನಗೇ ಅರಿವಿಲ್ಲದಂತೆ ಆಲೋಚಿಸತೊಡಗುತ್ತಾನೆ; ಅಪಾರ ಚಿಂತೆಯ ಹಿನ್ನೆಲೆಯಲ್ಲಿ ಚಿಂತನೆ ನಡೆಸುತ್ತಾನೆ.

ಈ ಚಿಂತನೆಯು ತೀವ್ರಗತಿಯಲ್ಲಿ ಸಾಗುತ್ತಿರುವಾಗ ಅಲ್ಲೇ ಅಂತ ರಂಗದಲ್ಲಿ ಅವನ ಅಂತರ್ಯಾಮಿಯಾಗಿ ನಿಂತಿರುವ ಪರಮ ಕರುಣಾಮಯನಾದ ಪರಮಾತ್ಮನ ಅಮೃತಮಯ ಅಂತರ್ವಾಣಿಯೊಂದು ಕೇಳಿಬರಲಾರಂಭಿಸುತ್ತದೆ:

"ಪ್ರಿಯ ವತ್ಸ, ಈ ಜಗತ್ತಿನಲ್ಲಿ ಶ್ರೇಯಸ್ಸು, ಪ್ರೇಯಸ್ಸು ಎಂಬ ಎರಡು ಅಂಶಗಳಿವೆ. ಇವು ಪ್ರತಿಯೊಬ್ಬ ಮನುಷ್ಯನ ಮುಂದೆಯೂ ಬಂದು ನಿಲ್ಲುತ್ತವೆ. ಮನುಷ್ಯ ಇವುಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬಹುದು. ಮನುಷ್ಯ ವಿವೇಕಿಯಾಗಿದ್ದರೆ ಚೆನ್ನಾಗಿ ವಿವೇಚಿಸಿ ಪರ್ಯಾಲೋಚಿಸಿ ಶ್ರೇಯಸ್ಸನ್ನು ಆರಿಸಿಕೊಳ್ಳುತ್ತಾನೆ. ಏಕೆಂದರೆ ಶ್ರೇಯಸ್ಸು ಮುಂದೆ ಎಂದೆಂದಿಗೂ ಶಾಶ್ವತವಾದ ಶಾಂತಿಯನ್ನು ಕೊಡುವಂಥದು. ಮನುಷ್ಯ ಮುಂದಾಲೋಚನೆಯಿಲ್ಲದ ಮಂದಮತಿಯಾದರೆ ಅವನು ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಏಕೆಂದರೆ, ಪ್ರೇಯಸ್ಸು ಪ್ರಿಯವನ್ನುಂಟುಮಾಡುವಂಥದು, ಇಂದ್ರಿಯಗಳ ಮೂಲಕ ಶೀಘ್ರವೇ ಸುಖ ಕೊಡುವಂಥದು. ಆದರೆ ಈ ತಾತ್ಕಾಲಿಕ ಸುಖದ ಹಿಂದೆಯೇ ಅಡಗಿದೆ ಘೋರ ದುಃಖ ಎಂಬುದು ಆ ಮಂದಮತಿಗೆ ತಿಳಿಯುವುದಿಲ್ಲ. ನೀನು ಇನ್ನಾದರೂ ಅವನಂತಾಗದಿರು, ಶ್ರೇಯಸ್ಸನ್ನೇ ಆರಿಸಿಕೊಂಡು ಧನ್ಯನಾಗು."

**ನಮ್ಮ ಪರಮ ಶ್ರೇಷ್ಠತೆ ಇರುವುದು ಬೀಳದೆ ಇರುವುದರಲ್ಲಲ್ಲ, ಆದರೆ ಪ್ರತಿ ಬಾರಿ ಬಿದ್ದಾಗಲೂ ಮೇಲೇಳುವುದರಲ್ಲಿ.**

— ಕನ್‌ಫ್ಯೂಸಿಯಸ್ (Confucious)

ನಿಜ, ಅಂತರ್ಯಾಮಿಯ ವಿವೇಕವಾಣಿ ನಿರಂತರವೂ ಮೊಳಗುತ್ತಿರುತ್ತದೆ. ಆದರೆ, ಮನುಷ್ಯ ಅದನ್ನು ಆಲಿಸುವ ಸ್ಥಿತಿಯಲ್ಲಿರುವುದಿಲ್ಲ. ಏಕೆಂದರೆ ವೈಜ್ಞಾನಿಕ ಶೋಧನೆ-ಸಾಧನೆ, ಮಾಧ್ಯಮಗಳ ಬೋಧನೆಯ ಗರ್ಜನೆ, ಭೋಗವಸ್ತುಗಳ ಪ್ರಕಟಣೆಯ ಘೋಷಣೆ—ಇವು ಅಂತರ್ಯಾಮಿಯ ವಾಣಿಯನ್ನು ಅಡಗಿಸಿಬಿಟ್ಟಿರುತ್ತವೆ! ಆದರೆ, ನಾವು ಅದಾಗಲೇ ನೋಡಿದಂತೆ ಕರ್ಮಫಲಗಳ ದುರ್ಭರ ದುಃಖವನ್ನುಂಡ ಮನುಷ್ಯ ಮೆಲ್ಲನೆ ಬುದ್ಧಿ ಕಲಿತು, ಅಂತರ್ಯಾಮಿಯ ವಿವೇಕವಾಣಿಯನ್ನು ಆಲಿಸುತ್ತ, ಮನಸ್ಸಂಯಮವನ್ನು ಸಾಧಿಸುತ್ತ ಸದಾಚಾರದಲ್ಲಿ ತೊಡಗುವ ಸಂಕಲ್ಪ ಮಾಡುತ್ತಾನೆ. "ಕೆಟ್ಟಮೇಲೆ ಬುದ್ಧಿ ಬಂತು" ಎಂಬ ಮಾತು ಸುಮ್ಮನೆ ಹುಟ್ಟಿಕೊಂಡಿತೆ? ಆದರೆ ಬುದ್ಧಿ ಬಂದ ಮೇಲೂ ಮನುಷ್ಯ ಎಡವಬಹುದು. ಆಗ ಅವನು ಮತ್ತೊಮ್ಮೆ ಸಂಕಲ್ಪವನ್ನು ದೃಢಗೊಳಿಸಿಕೊಂಡು ಸದಾಚಾರದಲ್ಲಿ ನೆಲೆ ನಿಲ್ಲುತ್ತಾನೆ, ಶಾಂತಿ ಫಲವನ್ನು ಅನುಭವಿಸಲಾರಂಭಿಸುತ್ತಾನೆ. ಅವನು ಆಸ್ವಾದಿಸುವ ಶಾಂತಿಸುಖವನ್ನು ಕಂಡ ಅವನ ಸೋದರ ವಿಲಾಸಿಗಳೂ ಮನಸ್ಸಂಯಮದಿಂದ ಕೂಡಿದ ಸದಾಚಾರದ ಮಾರ್ಗವನ್ನು ಅನುಸರಿಸಲು ಕ್ರಮೇಣ ಅಣಿಯಾಗುತ್ತಾರೆ. ಹೌದು, ಕ್ರಮೇಣ! ಏಕೆಂದರೆ, ದುರ್ಮಾರ್ಗದಲ್ಲಿ ಮನುಷ್ಯ ಈಗಾಗಲೇ ಬಹುದೂರ ಸಾಗಿಯಾಗಿದೆಯಲ್ಲ! ಆದ್ದರಿಂದ ಈಗ, ದುರ್ಮಾರ್ಗವನ್ನು ತಾನು ಬಿಟ್ಟೆನೆಂದರೂ ದುರ್ಮಾರ್ಗವು ಅವನನ್ನು ಬಡಪೆಟ್ಟಿಗೆ ಬಿಟ್ಟುಕೊಡುವುದಿಲ್ಲ! ಆದರೂ ಅವನು, ಅದಾಗಲೇ ಶಾಂತಿಸುಖವನ್ನನುಭವಿಸುತ್ತಿರುವ ತನ್ನ ಮಿತ್ರನ ಪ್ರಶಾಂತ ವದನವನ್ನೊಮ್ಮೆ ನೋಡುತ್ತಾನೆ, ಹೆಚ್ಚಿನ ಸ್ಫೂರ್ತಿ ಪಡೆಯುತ್ತಾನೆ, ಮತ್ತೊಮ್ಮೆ ಪ್ರಯತ್ನದಲ್ಲಿ ತೊಡಗಿ ತನ್ನ ದುಷ್ಟಪ್ರವೃತ್ತಿಯನ್ನು ಮೆಟ್ಟಿ ಮೇಲೇರಲು ದೃಢವ್ರತನಾಗುತ್ತಾನೆ.

ಹೀಗೆಯೇ ಮಾನವ ಮೆಲ್ಲಮೆಲ್ಲನೆ ಏಳುತ್ತ-ಬೀಳುತ್ತ, ಬೀಳುತ್ತ-ಏಳುತ್ತ ಕೊನೆಗೊಂದು ದಿನ ಎದ್ದು ನಿಲ್ಲುತ್ತಾನೆ, ಉದ್ಧಾರವಾಗುತ್ತಾನೆ. ಆಗ ಅವನ ಪರಮ ಆಪ್ತ ಅಂತರ್ಯಾಮಿಯು—

"ವತ್ಸ, ಕೊನೆಗೂ ನೀನು ವಿಜಯಿಯಾದೆ!" ಎನ್ನುತ್ತ ಆಹ್ಲಾದಿಸುತ್ತಾನೆ!

*